ಮತ್ತೆ ಓದತೊಡಗಿದ. ಧ್ವನಿಯಲ್ಲಿನ ಮಾಧುರ್ಯತೆಗೆ ಹುಚ್ಚೇ ಹಿಡಿಯುವಂತೆ... ಆಗೊಮ್ಮೆ ಈಗೊಮ್ಮೆ ಕಣ್ಮುಂದೆ ತಂಗಾಳಿಯಂತೆ ಹರಿದು ಮಾಯವಾಗಿಬಿಡುತ್ತಿದ್ದವಳು, ಕಣ್ಣಿಗೆ ಸ್ಪಷ್ಟವಾಗಿ ಕಾಣುತ್ತಿದ್ದಾಳೆ, ಕಾಣುತ್ತಲೇ ಇದ್ದಾಳೆ. ಬಾಗಿಲಲ್ಲಿ ಶುಭ್ರವಾಗಿ ನಿಂತು ಹೊಳೆಯುತ್ತಾಳೆ, ಬಗ್ಗಿ ಉಸಿರುಗಟ್ಟಿಸುತ್ತಾಳೆ, ಒಮ್ಮೇಲೆ ಹಿಂತಿರುಗಿ ಕೂದಲ ಸ್ಪರ್ಶದಿಂದ ರಕ್ತಹರಿಸದೆ ಕೊಲ್ಲುತ್ತಾಳೆ.

ತುಕ್ಕುಹಿಡಿದೇ ಹೋಗುತ್ತಿದ್ದ ಬದುಕು ಒಮ್ಮೇಲೆ ಹೈಕ್ವಾಲಿಟಿ ಸ್ಟೀಲಿನಂತೆ ಹೊಳೆಯುತ್ತಿರುವಂತೆ ಭಾಸವಾಯಿತವನಿಗೆ. ಗುಟಕಾ ಚೀಟಿಗಳ ಬದಲಿಗೆ ಶ್ಯಾಂಪು ಚೀಟಿಗಳು ಬಂದವು.

ಅಜರುದ್ದೀನ್ ಟೀಮು ವರ್ಲ್ಡ್ ಕಪ್ಪಿನಲ್ಲಿ ರಾವಣನ ಮರಿಮೊಮ್ಮಕ್ಕಳೆದುರು ಸೋಲುವಷ್ಟರಲ್ಲಿ ಎಲ್ಲ ಮುಗಿದುಹೋಗಿತ್ತು. ಎಳೆಎಳೆಯಾಗಿ ಬಿಡಿಸಿಕೊಳ್ಳುತ್ತ ವಿಹಂಗಮವಾಗಿ ಹರಡಿಕೊಳ್ಳುತ್ತಿದ್ದ ಮಧುರವಾದ ಕನಸು, ಹಿತವಾದ ವಾಸನೆ, ನರನಾಡಿಯನ್ನು ಮೀಟಿ ಎಳೆಯುವ ಪುಳಕ... ಎಲ್ಲಕ್ಕೂ ಕೊನೆಯಾಗಬೇಕಾಯಿತು. ರವಿಕಾಂತನ ಅಮ್ಮನ 'ಭಟ್ಟಿ ಇಳಿಸುವಿಕೆ' ಕೈಕೊಟ್ಟು ಒಬ್ಬಳು ಸಾವಿನ ಬಾಗಿಲನ್ನೂ ತಟ್ಟಿ ಬಂದ ಸುದ್ದಿ ಪೊಲೀಸರಿಗೂ ಮುಟ್ಟಿತ್ತು. ರವಿಕಾಂತನಿಲ್ಲದಿದ್ದಾಗ ಬಂದ ಪೊಲೀಸರು ಜನರ ಮುಂದೆ ಮನೆಯೆದುರು ಧಮಕಿಹಾಕಿ ಹೋಗಿದ್ದರು. ಊರು ಬಿಡಲೇಬೇಕಾದ ಪರಿಸ್ಥಿತಿಯ ಕಲ್ಪನೆಯೂ ಇರದವನು, ಪಕ್ಕದಲ್ಲೇ ಇದ್ದ ಅವಳ ಮನೆಯ ಸಂಧಿಗೆ ತಿರುಗುವ ಧೈರ್ಯ ಮಾಡಲಿಲ್ಲ. ತನಗಿಂತ ನಾಲ್ಕು ವರ್ಷ ದೊಡ್ಡವಳಾದರೂ 'ದಿವಾನಾ'ದ ಮಾಧುರಿಯೇ ಆಗಿ ಒಳಗೆ ಗುಪ್ತ ಆಸೆಗಳನ್ನು ಅರಳಿಸಿದ್ದವಳ ಮರೆತು, ಅಮ್ಮನ ದೊಡ್ಡಮ್ಮನ ಮಗಳು ನಿಲ್ಲಲು ನಾಲ್ಕಡಿ ಜಾಗ ಕೊಡುತ್ತಾಳೆಂಬ ಭರವಸೆಯಿಂದ ದಾವಣಗೆರೆಗೆ ಬಂದ.

> **ಅವಳ ನೋಡದೆ ಹೋಗುವಂತಿಲ್ಲ ಅಂದುಕೊಂಡ. ಮೆಲ್ಲಗೆ ಅವಳ ಮನೆಕಡೆ ನಡೆದ. ಮಾಸಿದ ಕರ್ಟನ್ನು ಗಾಳಿಗೆ ಅಲ್ಲಾಡಿತು. ಯಾಕೋ ಒಮ್ಮೆಲೆ ಮನಸ್ಸು ಹಿಂದೇಟು ಹಾಕಿತು.**

ಒಂದೇ ಜಿಲ್ಲೆಯಿಂದ ಬೇರ್ಪಟ್ಟರೂ ಹೋಲಿಕೆಯೂ ಇರದಷ್ಟು ಅಪರಿಚಿತವಾಗಿ ಕಂಡು ಬಂದ ದಾವಣಗೆರೆಯ ಗಿಜಿಗುಡುವ ದುಗ್ಗಮ್ಮನ ಪೇಟೆಯಲ್ಲೊಂದು ಕಡೆ ನಿಂತು ಮಂಡಕ್ಕಿ ಅಂಗಡಿಯಲ್ಲಿ ಕೂಲಿಗೆ ನಿಂತ. ಈ ಊರಿನಲ್ಲಿ ಮಾತಿಗೂ ದುಡ್ಡುಕೊಡಬೇಕೆನ್ನುವಂತೆ ಕಂಗಾಲಾಗಿ ಮೌನಿಯಾದ. ಅಮ್ಮ ದೊಡ್ಡಮ್ಮನ ಜೊತೆ ಶಾವಿಗೆ ಹೊಸೆಯಲು ನಿಂತಳು. ಉಂಡುತಿನ್ನಲು ಹೆದರುವ ಕಾಲ ಒಮ್ಮೇಲೆ ಮಾಯವಾಗಿ, ಹತ್ತಾರು ಟಾಕೀಸುಗಳು ವಾರಕ್ಕೊಮ್ಮೆ ರಂಜನೆ ಕೊಡತೊಡಗಿದವು. ಲಗ್ನ, ಲಗ್ನ, ಲಗ್ನ ಅಂತಾ ದುಂಬಾಲು ಬಿದ್ದ ಅಮ್ಮ–ದೊಡ್ಡಮ್ಮ ಕುಲಸ್ಥರೊಳಗೆ ರಾಜಮ್ಮ ಅನ್ನುವ ಸಾಮಾನ್ಯ ಸೌಂದರ್ಯದ ಲವಲವಿಕೆ ಸೊರಗಿರುವ ಹುಡುಗಿಯನ್ನು ಕಟ್ಟಿದರು. ಒಂದು ಲೂನಾ, ಇನ್ಷಿಯಲ್ ಉಂಗುರ, ವಾಚು ಅವನನ್ನು ಬದಲಾಯಿಸಲಿಲ್ಲ. ನಾನು ಇಲ್ಲಿಗೇ ಸೇರಬೇಕಾದವನು ಎಂಬಂತೆ ಟೀವಿ–ರೇಡಿಯೊ ರಿಪೇರಿ ಅಂಗಡಿಗೆ ಸೇರಿಕೊಂಡ, ಪಾರ್ಟನರ್ ಆದ. ಕೊನೆಗೆ ತನ್ನದೇ ಮಾಡಿಕೊಂಡ.

ಹೆಂಡತಿ ಸುಂದರಿಯಲ್ಲ, ಬದುಕಾದರೂ ಸುಂದರವಾಗಿರಲಿ ಎಂದು ಚಿಕ್ಕಮನೆಯನ್ನೇ ಚೊಕ್ಕದಾಗಿಟ್ಟುಕೊಂಡು ನಿರಂತರ ದುಡಿಮೆ ಹುಟ್ಟಿಸಿದ ಶಿಸ್ತಿಗೆ ಬದ್ಧನಾಗಿ ಬದುಕತೊಡಗಿದ. ಮಿಲ್ಲು ಮಾಯವೇ ಆಗಿ ಮಾಲುಗಳು ಏಳತೊಡಗಿದವು. ಕಣ್ಣಮುಂದೆ ಬರುವ ಕೂದಲನ್ನು ಉಫ್ ಎಂದು ಊದಿ ಹುಡುಗಿಯರ ಮುಂದೆ ರೋಮಿಯೋನಂತಿದ್ದ ರವಿಕಾಂತ ಅರ್ಧ ಬಕ್ಕತಲೆಯ